ಜಿಲ್ಲಾ ನಗರಾಭಿವೃದ್ಧಿ ಕೋಶ,
ಜಿಲ್ಲಾಧಿಕಾರಿಯವರ ಕಾರ್ಯಾಲಯ,
ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ದೂರವಾಣಿ ಸಂಖ್ಯೆ: 08226-222831
e-mail: ka.chamarajanagara.dudc@gmail.com
website: www.chamarajanagaradudc.mrc.gov.in
ಕೊಠಡಿ ಸಂಖ್ಯೆ: 127(ಎ), ಜಿಲ್ಲಾಡಳಿತ ಭವನ,
ಚಾಮರಾಜನಗರ -571313

ಸಂಖ್ಯೆ:ಚಾಜಿನಕೋ/ಸಿಎಂಐಡಿಪಿ/ಕೊನ/ಸಿಆರ್/01/2025-26 ದಿನಾಂಕ: 13.04.2026

# ಅಧಿಕೃತ ಜ್ಞಾಪನ

ವಿಷಯ : ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ 2025-26 ನೇ ಸಾಲಿನ ಕೊಳ್ಳೇಗಾಲ ನಗರಸಭೆಗೆ ಮೀಸಲಿರಿಸಿದ ಅನುದಾನದಡಿ ತಯಾರಿಸಿರುವ ಅಂದಾಜುಪಟ್ಟಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ : 1) ಸರ್ಕಾರದ ಆದೇಶ ಸಂಖ್ಯೆ: ಆಇ 340 ಆಕೋ-2/2025, ದಿನಾಂಕ: 01.09.2025.
2) ಮಾನ್ಯ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ, ಇವರ ಅಧಿಕೃತ ಜ್ಞಾಪನ ಸಂಖ್ಯೆ : CM/SG :01/2025-26, ದಿನಾಂಕ : 25.11.2025.
3) ಪೌರಾಯುಕ್ತರು, ನಗರಸಭೆ, ಕೊಳ್ಳೇಗಾಲ, ಇವರ ಪತ್ರದ ಸಂಖ್ಯೆ : ಕೆ.ಸಿ.ಎಂ.ಸಿ/ವಿಶೇಷ/ಅನುದಾನ/ತಾಂ.ವಿ/ಪಿಆರ್/01/2025-26, ದಿನಾಂಕ : 20.01.2026.
4) ಅಧೀಕ್ಷಕ ಅಭಿಯಂತರರು, ಮೈಸೂರು ಮಹಾನಗರಪಾಲಿಕೆ, ಮೈಸೂರು, ಇವರ ನಡವಳಿ ಆದೇಶ ಸಂಖ್ಯೆ :ಮೈನಪಾ/ಉಅ(ಅ)/180/2025-26, ದಿ: 02.03.2026.

**<>00<>**

ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ 2025-26 ನೇ ಸಾಲಿನ ಕೊಳ್ಳೇಗಾಲ ನಗರಸಭೆಗೆ ಮೀಸಲಿರಿಸಿದ ಅನುದಾನದಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಉಲ್ಲೇಖ(1)ರ ಸರ್ಕಾರದ ಆದೇಶದಂತೆ ರೂ. 150.00 ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ. ಉಲ್ಲೇಖ(2)ರ ಅಧಿಕೃತ ಜ್ಞಾಪನ ಆದೇಶದಲ್ಲಿ ರೂ.150.00 ಲಕ್ಷಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ.

ಉಲ್ಲೇಖ(2)ರ ಅನುಮೋದಿತ ಕ್ರಿಯಾಯೋಜನೆಯ ರೂ. 150.00 ಲಕ್ಷಗಳ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ತಾಂತ್ರಿಕ ಅನುಮೋದನೆ ಹಾಗೂ ಆಡಳಿತಾತ್ಮಕ ಅನುಮೋದನೆ ನೀಡಲು ಉಲ್ಲೇಖ(3) ರಲ್ಲಿ ಪೌರಾಯುಕ್ತರು, ನಗರಸಭೆ, ಕೊಳ್ಳೇಗಾಲ, ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪೌರಾಯುಕ್ತರು, ನಗರಸಭೆ, ಕೊಳ್ಳೇಗಾಲ ಇವರ ಉಲ್ಲೇಖ (3) ರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಕೊಳ್ಳೇಗಾಲ ನಗರಸಭೆಗೆ ಉಲ್ಲೇಖ(2)ರ ಅನುಮೋದಿತ ಕ್ರಿಯಾಯೋಜನೆಯ ಒಟ್ಟು ರೂ. 150.00 ಲಕ್ಷಗಳ ಅಭಿವೃದ್ಧಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಉಲ್ಲೇಖ(4) ರಲ್ಲಿ ಅಂದಾಜುಪಟ್ಟಿಗೆ ಅಧೀಕ್ಷಕ ಅಭಿಯಂತರರು, ಮೈಸೂರು ಮಹಾನಗರಪಾಲಿಕೆ, ಮೈಸೂರು, ಇವರು ತಾಂತ್ರಿಕವಾಗಿ ಪರಿಶೀಲಿಸಿ, ತಾಂತ್ರಿಕ ಅನುಮೋದನೆ ನೀಡಿರುವಂತೆ ರೂ. 150.00 ಲಕ್ಷಗಳ ಈ ಕೆಳಕಂಡ ಕಾಮಗಾರಿಯ ಅಂದಾಜುಪಟ್ಟಿಗೆ ಷರತ್ತುಗಳಿಗೊಳಪಟ್ಟು ಆಡಳಿತಾತ್ಮಕ ಮಂಜೂರಾತಿ ನೀಡಿ ಆದೇಶಿಸಿದೆ.

| ಕ್ರ. ಸಂ. | ವಿವರ | ಅಂದಾಜುಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | ಕೊಳ್ಳೇಗಾಲ ತಾ॥ ಶ್ರೀರಂಗಪಟ್ಟಣ-ಮಲೈ ಮಹದೇಶ್ವರ ಬೆಟ್ಟದ ರಸ್ತೆ ರಾಜ್ಯ ಹೆದ್ದಾರಿ-79ರ ಸರಪಳಿ 68.70 ರಿಂದ 69.61 ಕಿ.ಮೀ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ (ದಾಸನಪುರ ಜಂಕ್ಷನ್ ರಿಂದ ಎನ್ ಹೆಚ್-948 ಸೇರುವ ರಸ್ತೆ (ಪಶು ಇಲಾಖೆ ಕಛೇರಿ ಹತ್ತಿರ) | 150.00 |

## ಷರತ್ತುಗಳು

1) ಆಡಳಿತಾತ್ಮಕ ಮಂಜೂರಾತಿ ಪಡೆದಿರುವ ಕಾಮಗಾರಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ಆಇ 340 ಆಕೋ-2/2025, ದಿನಾಂಕ: 01.09.2025 ಮತ್ತು ಉಲ್ಲೇಖ(2)ರ ಆದೇಶದಲ್ಲಿ ಹೊರಡಿಸಿರುವ ಮಾರ್ಗಸೂಚಿ/ಷರತ್ತುಗಳಂತೆ ಅನುಷ್ಠಾನಗೊಳಿಸತಕ್ಕದ್ದು.

2) ಅನುಮೋದಿತ ಕ್ರಿಯಾಯೋಜನೆಯಲ್ಲಿನ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳನ್ನು ಕೆ.ಟಿ.ಪಿ.ಪಿ ಕಾಯ್ದೆ-1999 ಮತ್ತು ಕೆ.ಟಿ.ಪಿ.ಪಿ. ನಿಯಮಗಳು -2000 ಹಾಗೂ ಕೆ.ಪಿ.ಪಿ ಪೋರ್ಟಲ್ ಮುಖಾಂತರ ಕೈಗೊಂಡು ಪ್ಯಾಕೇಜ್‌ವಾರು ಟೆಂಡರ್‌ಗಳಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದುಕೊಂಡು ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು.

3) ಕಾಮಗಾರಿಯ ಗುಣಮಟ್ಟವನ್ನು 3ನೇ ವ್ಯಕ್ತಿಯ ಮೂಲಕ ಅಥವಾ ಗುಣನಿಯಂತ್ರಣ ಮಾನಿಟರ್ಸ್ ಮೂಲಕ ತಪಾಸಣೆಗೆ ಒಳಪಡಿಸತಕ್ಕದ್ದು.

4) ಕಾಮಗಾರಿಯ ಅನುಷ್ಠಾನಗೊಳಿಸುವಾಗ ತಗಲಬಹುದಾದ ಮೊತ್ತವು ಹೆಚ್ಚುವರಿಯಾದಲ್ಲಿ ಸದರಿ ವೆಚ್ಚವನ್ನು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸಂಪನ್ಮೂಲಗಳಿಂದ ಭರಿಸಿಕೊಳ್ಳತಕ್ಕದ್ದು.

1) ಕಾಮಗಾರಿಯ ಪ್ರತಿ ಹಂತದ ವಿವರಗಳನ್ನು ಆನ್‌ಲೈನ್‌ನಲ್ಲಿ ಕಾಲೋಚಿತಗೊಳಿಸಲು ಸಂಬಂಧಪಟ್ಟವರು ಕ್ರಮವಹಿಸತಕ್ಕದ್ದು.

2) ಕಾಮಗಾರಿಯ ಅನುಷ್ಠಾನ ಪ್ರಗತಿಯಲ್ಲಿದ್ದಾಗ ಪ್ರತಿ ಹಂತದಲ್ಲಿ ಛಾಯಚಿತ್ರಗಳನ್ನು ತೆಗೆದು ಆನ್‌ಲೈನ್ ತಂತ್ರಾಂಶದಲ್ಲಿ ದಾಖಲಿಸತಕ್ಕದ್ದು.

3) ಗುತ್ತಿಗೆದಾರರು ನಿರ್ವಹಿಸಿದ ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಿ ವರದಿಗಳನ್ನು ದಾಖಲಿಸುವುದು.

ಜಿಲ್ಲಾಧಿಕಾರಿ
ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ಪ್ರತಿಯನ್ನು ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.

1) ಮಾನ್ಯ ಸರ್ಕಾರದ ಕಾರ್ಯದರ್ಶಿಯವರು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
2) ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ವಿ ವಿ ಗೋಪುರ, ಬೆಂಗಳೂರು.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

1) ಪೌರಾಯುಕ್ತರು, ನಗರಸಭೆ, ಕೊಳ್ಳೇಗಾಲ.
2) ಕಛೇರಿ ಕಡತಕ್ಕೆ.